**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಶಹಬಾದ</u>**
**CC No: 166/2020**

| | | |
|---|---|---|
| CW : 3 | | PW: 1 |
| ಹೆಸರು | : | ಸೈಯದನೂರ |
| ತಂದೆಯ ಹೆಸರು | : | ಸೈಯದರಸೂಲ್ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಆಟೋ ಚಾಲಕ |
| ಸ್ಥಳ | : | ಶಹಾಬಾದ |

**(ದಿನಾಂಕ: 07-03-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**
**<u>ಮುಖ್ಯ ವಿಚಾರಣೆ: ಸ.ಸ.ಅ ವಕೀಲರಿಂದ</u>**

ಸಾಕ್ಷಿಗೆ 2 ಪಂಚನಾಮೆಯನ್ನು ತೋರಿಸಲಾಗಿ, ಸಾಕ್ಷಿಯು ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ಮತ್ತು 2 ಎಂದು, ಸಾಕ್ಷಿಯ ಸಹಿಗಳನ್ನು ನಿ.ಪಿ.1 (ಎ) ಮತ್ತು (ಬಿ) ಎಂದು ಗುರುತಿಸಲಾಯಿತು. ದಿಃ 10-10-2016 ರಂದು ಮತ್ತು ದಿಃ 09-10-2016 ರಂದು ರಾತ್ರಿ 09-30 ರಿಂದ 10-00 ಗಂಟೆಗೆ ಶಹಾಪುರದ ಕಡೆ ಇರುವ ಒಂದು ಹಳ್ಳಿಯಲ್ಲಿ ಸಹಿ ಮಾಡಿರುತ್ತೇನೆ. ಪೇಸಬುಕ್ನಲ್ಲಿ ಪೋಟೋ ಅಪಲೋಡ್ ಮಾಡಿದ ಕಾರಣ ಪಂಚನಾಮೆ ಮಾಡಿದ್ದು, ಆ ಕಾರಣಕ್ಕೆ ಸಹಿ ಮಾಡಿರುತ್ತೇನೆ. ನನ್ನ ಜೊತೆ ಇನ್ನೊಬ್ಬರು ಇದ್ದರು ಅವರ ಹೆಸರು ನನಗೆ ಗೊತ್ತಿರುವುದಿಲ್ಲ, ಜಾಗೆಯನ್ನು ಪೊಲೀಸರು ತೋರಿಸಿರುತ್ತಾರೆ. ನನ್ನ ಸಮಕ್ಷಮ ಒಂದು ಮೊಬೈಲನ್ನು ಜಪ್ತಿಪಡಿಸಿಕೊಂಡಿರುತ್ತಾರೆ. ನ್ಯಾಯಾಲಯದ ಮುಂದಿರುವ ಮೊಬೈಲನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಮು. ಮಾ-1 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸ.ಸ. ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)**
**<u>ಪಾಟೀ ಸವಾಲು: ಸ.ಸ. ಅಭಿಯೋಜಕರಿಂದ</u>**

ದಿಃ 09-10-2016 ರಂದು ರಾತ್ರಿ 10-00 ರಿಂದ 10-30 ರವರೆಗೆ ಶಹಾಬಾದ ನಗರ ಪೊಲೀಸ್ ಠಾಣೆಯಲ್ಲಿ ಆರೋಪಿ ಶಿವಕುಮಾರ ಬಳಿಯಿಂದ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಒಂದು ಮೈಕ್ರೊಮ್ಯಾಕ್ಸ ಟಚಸ್ಕ್ರಿನ್ ಮೊಬೈಲನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಅಂದರೆ ಸರಿ. ದಿಃ 10-10-2016 ರಂದು ರಾತ್ರಿ 09-00 ರಿಂದ 10-00 ರವರೆಗೆ ಆರೋಪಿತನ ತಂದೆ ಶಂಕರ ಕೊಡಚಿರವರು ತೋರಿಸಿದ ಶಹಾಪುರ ತಾಲೂಕಿನ ಉರಸಗುಂಡಗಿ ಗ್ರಾಮದ ಆರೋಪಿತನ ಅಜ್ಜ ಮತ್ತು ಅಜ್ಜಿಯ ಮನೆಯ ಮುಂದೆ ಕಟ್ಟೆಯ ಮೇಲೆ ಪಂಚನಾಮೆಯನ್ನು ಜರುಗಿಸಿರುತ್ತಾರೆ ಅಂದರೆ ಸರಿ. ಆಗ ಚಾಸಾ-2 ರವರು ಸಹ ಹಾಜರು ಇದ್ದರು.

**<u>ಪಾಟೀ ಸವಾಲು: ಶ್ರೀ ಎನ್. ಪಿ. ಡಿ. ವಕೀಲರು ಕಾಲಾವಕಾಶ ಕೋರಿದ್ದು, ರೂ. 200/- ಖರ್ಚು ಸಮೇತ ಕಾಲಾವಕಾಶ ನೀಡಿ ಮುಂದೂಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೆ. ಸರಿ ಇದೆ.**

**-Sd-**

**ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಶಹಬಾದ.**